Doc-11 F-24

At Ranjit
From 12-7-46
India To-Day
ಈಶ್ವರಲಾಲ್'-ಚಾರ್ಲಿ-ರೋಸ್'
ಪ್ರಥ್ವಿರಾಜ್' — ಪಾತ್ರವಹಿಸಿರುವ
ಇಂದಿನ ಭಾರತ

Regd. No. M 1299 SATYAVADI Fonnded 1917

ಸತ್ಯವಾದಿ
SATYAVADI

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 24 ಸಂಚಿಕೆ 244 | ಸೆಕೇವಾರ 15—7—46 | ಬಿಡಿ ಪ್ರತಿ 3 ಪೈ

At Opera
2 nd Glorious Week
LAVANGI
ರಾವ್ — ರುಕ್ಮಿಣಿ — ಜಯಮ್ಮ
ಪಾತ್ರವಹಿಸಿರುವ
ಲವಂಗಿ (ತಮಿಳು

ಗಾಂಧೀಜಿಯವರಿಗೆ ಕಟ್ಟಡಗಳ ಬಹುಮಾನ

'ಸರ್ವಥಾ ಕಾಂಗ್ರೆಸ್ ಸೇರಬೇಡಿರಿ'

ದಿ. ಭೂಲಾಭಾಯಿ ದೇಸಾಯಿಯವರ ವರ್ಣಪೂರ್ವದ ಉಪದೇಶ

'ಸರ್ವಥಾ ಕಾಂಗ್ರೆಸಿನಲ್ಲಿ ಸೇರಬೇಡಿರಿ. ನೀವು ನಿಶ್ಚಯ ಮಾಡುವ ಮೊದಲು ನೂರು ಸಲ ವಿಚಾರ ಮಾಡಿರಿ ಇದು ನನ್ನ ಉಪದೇಶ' ಎಂದು ದಿ. ಭೂಲಾಭಾಯಿ ದೇಸಾಯಿಯವರು ಆ ಯುಧ ಹಿಂದ ಸೈನ್ಯದ ಕೈದಿಗಳ ವಕೀಲಿ ನಡಿಸಲು ದಿಲ್ಲಿಯಲ್ಲಿದ್ದಾಗ ಬಿಹಾರ ಪ್ರಾಂತದ ಮಾಜೀ ಕಾಂಗ್ರೆಸ ವಿತ್ತ ಮಂತ್ರಿ ಡಾ. ಖರೆಯವರನ್ನು ಕಂಡು ಹೇಳಿದರು. ವಿದೇಶ ಹಿತಸಂಬಂಧ ಖಾತೆಯ ವಂತ್ರಿಗಳಾದ ಖರೆಯನವರು ಮಲಯಾದಲ್ಲಿರುವ ಹಿಂದೀಯರ ಪರವಾಗಿ ವಕೀಲಿ ನಡೆಸಲು ದೇಸಾಯರನ್ನು ಬಿನ್ನವಿಸಲು ಹೋಗಿದ್ದರು. ಸರಕಾರಿ ಕೆಲಸ ನುಗಿದ ನಂತರ ಶ್ರೀ ದೇಸಾಯರು ಮಹಾತ್ಮರೊಂದಿಗೆ ಖರೆಯವರು ನಡೆಸಿದ ಭೇಟಿ-ಸಂಭಾಷಣೆಗಳ ಬಗ್ಗೆ ವಿಚಾರಿಸಿ 'ಕಾಂಗ್ರೆಸಿನಲ್ಲಿ ಸೇರಲು ನೀವು ನಿಜವಾಗಿಯೂ ತವಕ ಪಡುತ್ತಿರುವಿರೇನೆಂದು' ಕೂತೂಹಲದಿಂದ ಕೇಳಿದರು. ದೇಸಾಯರು ಇಹಲೋಕ ಬಿಡುವ ಒಂದು ದಿನ ಮುಂಚಿತವಾಗಿ ಡಾ|| ಖರೆಯನವರು ತಮ್ಮಿಬ್ಬರಲ್ಲಾದ ಈ ಸಂಭಾಷಣೆಯನ್ನು ಪತ್ರಿಕೆಗಳಿಗೆ ಪ್ರಕಟನೆಗೆ ಕೊಟ್ಟದ್ದು ಈ ರೀತಿಯಾಗಿದೆ. (ಬಿ| (ಸಶೇಷ)

ಕಾಂಗ್ರೆಸ ಪಕ್ಷದ ಮೇಲೆ ದಾವಾ

ಮೈಸೂರು ಜುಲೈ 13 — ಶ್ರೀಮಾನ್ ಎಂ. ಆರ್. ಸಿ ಒಸಪ್ಪನವರು ಪೌರಸಭೆಯ ಕಾಂಗ್ರೆಸ್ ಪಕ್ಷದ ಮೇಲೆ ಹೂಡಿರುವ ದಾವೆಯು ತಾ|| 29 ಕ್ಕೆ ಮುಂದುವರಿದಿದೆ.

ನಿಮ್ಮ ವರ್ಗದವರ ಕೇಳಿಕೆ ಬಗ್ಗೆ ಗಾಂಧೀಜಿಯವರನ್ನು ಅಟಬಿಡ್ಕರ್ ಮತ್ತು ರಾಜಭೋಜರು ಕಾಣಲಿರುವರು.

ಈ ವಾರದ ಭವಿಷ್ಯ

(ಓಂ ಜ್ಯೋತಿಷ್ಯರಿಂದ)

ಮೇಷ — ಮನಸ್ಸು ಶಾಂತತೆಯಿಂದಿರುವದಿಲ್ಲ. ಆರೋಗ್ಯವು ಚನ್ನಾಗಿಯೇ ಇರುತ್ತದೆ. ವ್ಯವಹಾರದಲ್ಲಿ ಅನರ್ಥಪ್ರಾಪ್ತಿ.

ವೃಷಭ — ದೇಹ ಸ್ಥಿತಿ ಸೆಟ್ಟಿಗಿರುವದಿಲ್ಲ. ಖರ್ಚು ಹೆಚ್ಚು ಮನಸ್ಸಿಗೆ ಚಿಂತೆ ಬೇಸರ. ವ್ಯವಹಾರದಲ್ಲಿ ನಷ್ಟ ನಿಷ್ಫೂರ.

ಮಿಥುನ — ಆರೋಗ್ಯ ಸುಖ ಲಾಭ ಯಶ. ಸಂತೋಷಗಳುಂಟು.

ಕಟಕ — ದೇಹವು ನಿರೋಗವಾಗಿದ್ದರೂ ಮನಸ್ಸು ಅಸ್ವಸ್ಥವಾಗಿರುತ್ತದೆ.

ಸಿಂಹ — ಮನಸ್ಥಿತಿ ಸೆಟ್ಟಿಗೆರೆದು ಲಾಭವಿರುವುದಿಲ್ಲ. ಕೋಪ ಹೆಚ್ಚುತ್ತದೆ. ದುರ್ವ್ಯಯದ ಸಂಭವವೂ ಇದೆ.

ಕನ್ಯ — ವ್ಯವಹಾರದಲ್ಲಿ ಎಷ್ಟೆಗಳು ಬರುತ್ತವೆ. ಮನಸ್ಸಿನಲ್ಲಿ ಗೃಹಕೃತ್ಯ ವಿಚಾರದ ಕಳವಳ.

ತುಲ — ಮನಸ್ಸು ಹರ್ಷಯುತವಾಗಿಯೂ ದೇಹವು ನಿರೋಗವಾಗಿಯೂ ಇರುತ್ತದೆ. ವ್ಯವಹಾರದಲ್ಲಿ ಯಶವುಂಟು.

ವೃಶ್ಚಿಕ — ಸಾಂಪತ್ತಿಕ ಲಾಭವುಂಟು ಶರೀರದಲ್ಲಿ ಆರೋಗ್ಯವುಂಟು ಮನಸ್ಸಿನಲ್ಲಿ ಸಂತೋಷವುಂಟು ನೆನೆದ ಕಾರ್ಯಗಳು ಕೈ ಗೂಡುವುವು.

ಧನಸ್ಸು — ದೇಹವು ನಿರೋಗವಾಗಿಯೂ ಮನಸ್ಸು ಉತ್ಸಾಹವಾಗಿಯೂ ಇರುತ್ತದೆ ವ್ಯವಹಾರದಲ್ಲಿ ಯಶವುಂಟು-ಸಜ್ಜನರ ಸಹವಾಸ ಲಾಭವಾಗುತ್ತದೆ

ಮಕರ — ಅನಾರೋಗ್ಯದಭಯವಿದೆ. ವ್ಯವಹಾರದಲ್ಲಿ ಶತ್ರುಗಳಭಯವಿದೆ. ಅದಾಯವು ಶೂನ್ಯವಾಗಿರುತ್ತದೆ.

ಕುಂಭ — ಮನೋರೋಗದಭಯವಿದೆ, ವ್ಯವಹಾರದಲ್ಲಿ ತೊಂದರೆಗಳಿರುತ್ತವೆ. ಜಾಗರೂಕತೆ ಅವಶ್ಯಕ.

ವಿವಿಧ ವರ್ತಮಾನ

ನಿಮ್ನ ವರ್ಗದವರಿಗೆ ಕೊಡಬೇಕೆಂದಿರುವ ಸತ್ಯಾಗ್ರಹದಲ್ಲಿ ಮಹಾ ಮುಖಂಡರಾದ ಅಂಬೇಡ್ಕರ್ ಮತ್ತು ಶಿವರಾಜ್‌ರವರು ಮೊದಲು ಭಾಗವಹಿಸಬೇಕೆಂದು ಒಬ್ಬರ ಮಾಡಿರುವ ಸಲಹೆಯು ಉಚಿತವಾಗಿದೆ.

ಇಂಗ್ಲೆಂಡಿನಲ್ಲಿ ಮೋಟಾರು ಕಾರುಗಳು ವಿಪರೀತರಾಗುತ್ತಿದೆಯಂತೆ. 1944 ರಲ್ಲಿ ತಿಂಗಳಿಗೆ 125 ಕಾರು ಮಾತ್ರ ತಯಾರಾಗುತ್ತಿದ್ದಿತೆಂದೂ, ಈ ಮಾರ್ಚಿಯಲ್ಲಿ 12419, ಏಪ್ರಿಲ್‌ನಲ್ಲಿ 15348 ತಯಾರಾಗಿರುವುವಂತೆ.

ಇಲಿಗಳ ಹಾವಳಿಯಿಂದ ಭಾರತದಲ್ಲಿ ಪ್ರತಿದಿನವೂ ಐದು ಹಡಗು ತುಂಬುವಷ್ಟು ಧಾನ್ಯ ಹಾಳಾಗುತ್ತಿರುವುದಂತೆ.

ಚಿಟಗಾಂಗಿನಲ್ಲಿ ನೆರಹಾವಳಿಯಿಂದ 50 ಸಾವಿರ ಸಂಸಾರಿಗಳು ನಿರಾಶ್ರಿತರಾದರು.

ಬೊಂಬಾಯಿನಲ್ಲಿ ಅಂಚೆ ಮುಷ್ಕರ ನಡೆಸುತ್ತಿರುವವರ ಬದಲಿಗೆ ಜನರನ್ನು ದಿನಕ್ಕೆ ರೂ. 5 ಕೊಡುವುದಾಗಿ ತಿಳಿಸಿದರು ಬರಲಿಲ್ಲವಂತೆ.

ಈಜಿಪ್ಟ ಮತ್ತೆ ಬ್ರಿಟನ್ನಿಗೆ ನಡೆಯುತ್ತಿರುವ ಸಂಧಾನ ನಿಲ್ಲಿಸಬೇಕೆಂದು ಹೇಳುತ್ತಿದ್ದ 7 ಪತ್ರಿಕೆಗಳನ್ನು ನಿಲ್ಲಿಸಲಾಗಿದೆ.

ಸರ್ಕಾರಕ್ಕೆ ಮೋಸ

ನ್ಯೂಯಾರ್ಕ್ ಜುಲೈ 10 — ಆಟಗಾರ ಕೋಟ್ಯಾಧೀಶ್ವರ ಹೆನ್ನಿ ಲಪ್ಟಿಂ ಆದಾಯ ತೆರಿಗೆಯಲ್ಲಿ ಸರ್ಕಾರವನ್ನು ಮೋಸಪಡಿಸಿದ. ಅಪಾದನೆಗೆ ನಾಲ್ಕು ವರ್ಷ ಸಜಾ ವಿಧಿಸಲ್ಪಟ್ಟು 115000 ಡಾಲರ್ ಸಹಾ ಜುಲ್ಮಾನೆ ವಿಧಿಸಲಾಯಿತು.

ವಿಾನ — ಶಾರೀರಿಕ ವ್ಯವಹಾರಿಕ ಸಾಂಪತ್ತಿಕ ಸ್ಥಿತಿಗಳು ಉತ್ತಮವಾಗಿರುತ್ತವೆ.

ಗಾಂಧೀಜಿಗೆ ಬಹುಮಾನ

ಪಂಚಗಣಿ ಜು 13 — ಗಾಂಧೀಜಿ ತಮ್ಮ ಪರಿವಾರದೊಂದಿಗೆ ಇಲ್ಲಿಗೆ ಬಂದರು. ಸುಮಾರು 50 ಸಾವಿರ ರೂ. ಬೆಲೆ ಬಾಳುವ ಒಂದು ಬಂಗ್ಲೆ ಮತ್ತು ಒಂದು ಧರ್ಮಶಾಲೆಯು ಕಸ್ತೂರಿಬಾ ರಾಷ್ಟ್ರೀಯ ಸ್ಮಾರಕ ನಿಧಿಗಾಗಿ ಗಾಂಧೀಜಿಗೆ ಬಹುಮಾನವಾಗಿ ಕೊಡಲಾಯಿತು.

ಅಂಚೆ ಮುಷ್ಕರಕ್ಕೆ ಮದರಾಸು ಸೇರಿತು

ಮದರಾಸು ಜು 14— 1000 ಮಂದಿ ಅಂಚೆಯವರು ಮುಷ್ಕರಕ್ಕೆ ಸೇರಿದರು. ಪೋಲೀಸಿನವರು ಪೋಸ್ಟಾಫೀಸು ಉಸ್ತುವಾರಿ ನಡೆಸುತ್ತಿರುವರು. ಮನೆಮನೆಗೆ ಕಾಗದ ಬಟವಾಡೆ ಮಾಡುವುದು ನಿಲ್ಲಿಸಲಾಗಿದೆ. ಫೋಕ್ ಕೆಲಸ ಹೆಚ್ಚಿಸಿಕೊಳ್ಳಲಾಗಿದೆ. ನಗರದಲ್ಲಿ ಅಲ್ಲಲ್ಲಿ ಇಟ್ಟಿದ್ದ ಅಂಚೆಪೆಟ್ಟಿಗೆಗಳನ್ನು ತೆಗೆಯಲಾಗಿದೆ.

ದ. ಆಫ್ರಿಕಾ ಸತ್ಯಾಗ್ರಹ

ದರ್ಬಾರ್ ಜು 13 — ಈ ದಿನ 13 ಮಂದಿ ಸತ್ಯಾಗ್ರಹಿಗಳಿಗೆ ಕಾರಾಗೃಹ ಶಿಕ್ಷೆ ವಿಧಿಸಲಾಯಿತು.

ಲಕ್ಕವಳ್ಳಿ ನಿರಾವರಿ ಯೋಜನೆ

ಮೈಸೂರು ಸರಕಾರದವರು ಭದ್ರ ನದಿಗೆ ಲಕ್ಕವಳ್ಳಿ ಹತ್ತಿರ 9 ಕೋಟಿ ರೂಪಾಯಿ ಖರ್ಚಿನಿಂದ ಒಂದು ಅಣೆ ಕಟ್ಟೆ ಕಟ್ಟಲು ಕ್ಷೀಪ್ರದಲ್ಲೇ ಪ್ರಾರಂಭಿಸುವರೆಂದು ತಿಳಿಯಬಂದಿದೆ.

ಹಾಸ್ಟೆಲ್ ಪ್ರಾರಂಭೋತ್ಸವ

ಮೈಸೂರು ಜು 13 — ರಾಜಧಾನಿಯ ಶ್ರೀ ಹೊಂಬಾಳೆರಂಗಯ್ಯ ಕುಚಿಟಿಗರ ವಿದ್ಯಾರ್ಥಿನಿಲಯದ ಪ್ರಾರಂಭೋತ್ಸವವು ತಾ|| 19ನೇ ಶುಕ್ರವಾರ ಸಂಜೆ 6 ಗಂಟೆಗೆ ಮುನಿಸಿಪಲ್ ಪ್ರೆಸಿಡೆಂಟ್ ಶ್ರೀ ರಾಮಚಂದ್ರರಾವ್ ಭೋಂಭೋರೆಯವರ ಅಧ್ಯಕ್ಷತೆಯಲ್ಲಿ ನಡೆಯುವುದು.

॥ ವಂದೇ ಮಾತರಂ ॥

ಶ್ರೇಷ್ಠವಾದ

ರಾಜಪುರಿ ಹೊಗೇಸೊಪ್ಪಿನಿಂದ

— ತಯಾರಿಸಲ್ಪಟ್ಟ —

ಕಾಂಗ್ರೆಸ್

(ರಿಜಿಸ್ಟರ್ಡ್)

ಮಂಗಳೂರು

ಬೀಡಿಗಳು

ಜಿ. ಎಸ್. ಟೊಬ್ಯಾಕೊ ವರ್ಕ್ಸ್

ಬಸ್ ಟರ್ಮಿನಸ್ ಮೈಸೂರು

Get Medical Diplomas

At home : — Ayurvedic Homeopathic, Unani, etc Prospectus Free.

Old Indian Medical College
Kotgarh, Simla

ಸುಖ ಆರೋಗ್ಯ ಆನಂದದಾಯಕ

ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ. ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು. ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. -ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಪ್ರಸಿದ್ಧ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು. ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮಧ್ಯದಾಸು.

Edited, Printed and Published by M. S. Krishna Rao, at the Satyavadi Press, Chamaraja Agrahar, Mysore

ಅಕ್ಕರ ಸಾಮಾಜಿಕ

ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

ಅಶೋಕಾ ಫಾರ್ಮೆಸಿ

ಲ್ಯಾನ್ಸ್‌ಡೌನ್‌ಬಜಾರ್, ಮೈಸೂರು

ಶಾಸ್ತ್ರೀಯ ಮತ್ತು ಅನುಭವಸಿದ್ಧವಾದ ಔಷಧಗಳು ದೊರೆಯುತ್ತದೆ

ಸತ್ಯವಾದಿ

ದಿನ ಪತ್ರಿಕೆ. ತಿಂಗಳಿಗೆ ಆಣೆ

ಸೋಮವಾರದ ಸಂಚಿಕೆ

ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆಸಮೇತ ರೂ 1--12-0

ವೈತ್ತಾಂತ ಸಂಗ್ರಹ

ವೆಲ್ಲೂರಿನಲ್ಲಿಯ ಆಹಾರ ಸಮಿತಿಯವರು ಅಲ್ಲಿ ಪೂರಿಯ ಬೆಲೆಯನ್ನು ಅರ್ಧಕ್ಕೆ ಇಳಿಸಿದರು. ಈಗಿರುವುದು ಎರಡು ಪೂರಿಗೆ ಒಂದೂವರಾಣೆ.

ಕಲ್ಕತ್ತಾ ಜು 12— ಇಂಡೋನೇಷಿಯಾ ಸರಕಾರದವರು ಭಾರತಕ್ಕೆ ಈ ತಿಂಗಳಲ್ಲಿ 55 ಸಾವಿರ ಟನ್ ಅಕ್ಕಿಯನ್ನೂ, ಆಗಸ್ಟ್‌ನಲ್ಲಿ 34 ಸಾವಿರ ಟನ್ ಅಕ್ಕಿಯನ್ನೂ ಕಳಾಸಿಸುವರೆಂದು ತಿಳಿಯಬಂದಿದೆ.

ಸೂಚನೆ — ದಕ್ಷಿಣಾಯನ ಪುಣ್ಯಕಾಲದ ಪ್ರಯುಕ್ತ ನಾಳೆಯ ಪತ್ರಿಕೆಯು ಪ್ರಕಟಿಸಲ್ಪಡುವುದಿಲ್ಲ. ಮ್ಯಾ.

ಹೊಸ ಜ್ವಾಲಾಮುಖಿ

ಬಾಕುವಿಂದ ಸುಮಾರು 50 ಮೈಲು ದೂರದಲ್ಲಿರುವ ಸೋವಿಯಟ್ ಅಜರ್‌ಬೈಜಾನದ ಒಂದು ಪರ್ವತದಲ್ಲಿ ಜ್ವಾಲಾಮುಖಿ ಸ್ಫೋಟವಾಗಿದೆಯೆಂದು ಮಾಸ್ಕೊ ಆಕಾಶವಾಣಿಯಲ್ಲಿ ಹೇಳಲಾಯಿತು. ಜ್ವಾಲಾಮುಖಿ ಪ್ರಾರಂಭವಾಗಿ ಭೂಗರ್ಭದಲ್ಲಿ ಗುಡುಗು ಕೇಳಿ ಬರುತ್ತಿದ್ದು ಆವಾರಸವು ಸುಮಾರು 1800 ಮೊಳ ಎತ್ತರ ಚಿಮ್ಮುತ್ತಿದೆಯೆಂದು ಹೇಳಲಾಗಿದೆ.

ಊಟಕಮಂಡ್ ಜು 12— ನೀಲಗಿರಿ ಕಲೆಕ್ಟರು ಮಿ || ಫ್ರೇಸರರು ಕೋರ್ಟಿನಲ್ಲಿ ಒಂದು ಅಪೀಲನ್ನು ಕೇಳುತ್ತಿದ್ದಂತೆಯೇ ನಿಧನರಾದರು.

The Mysore Silk Filatures Ltd.,

T. NARASIPUR

NOTICE

NOTICE is hereby given that the Eighth Ordinary General Meeting of the Shareholders of the Mysore Silk Filatures Ltd., will be held at Mysore, in the premises of the Company, in Manantody Road, on Sunday the 4th August 1946 at 3 p. m. to transact the following business—

1 To receive and adopt the Directors' Report and Audited Balance Sheet and Profit and Loss Account for the year ended 31st December 1945.

2 To declare a Dividend.

3 To elect Directors in place of the following Directors who retire and being eligible, offer themselves for re-election :

Messrs. 1 M. S. Basavanna Devaru
2 R. Vyasa Rao

4 To appoint an auditor or auditors for the current year and fix their remueration.

6 To sanction a grant of Rs. 5000 to the Mysore Silk Association for its Building Fund.

By Order of the Board
For The Mysore Silk Filatures Ltd.
G. Krishnaswamy
Managing Agents

T. Narasipur
6—7—46

N. B.— The Share Transfer Books of the Company will be closed from 21-7-1946 to 4-8-1946 (both days inclusive) The Dividend Warrants will be posted on or after 1-9-46 to the shareholders whose names are registered in the Register of Members as on 20-7-1946. Shareholders are requested to notify immediately any change of address to enable Dividend warrants being posted to the correct addresses.

ಜಾತಿಯ ಅಹಂಕಾರ

ಸರ್ ವಾಲ್ಟರ್ ಟ್ರಿಡರ್ಸ್ ಎಂಬ ಕನ್ಸರ್ವೆಟಿವ್ ಪಾರ್ಲಿಮೆಂಟು ಸಭ್ಯನು "ಭಾರತ ದೇಶಕ್ಕೆ ಸ್ವಾತಂತ್ರ್ಯವನ್ನು ಕೊಡಲಿರುವಂತೆ; ಇಷ್ಟರೊಳಗೆ ನಮ್ಮ ಹೆಂಗಸರು ಮಕ್ಕಳನ್ನು ಅಲ್ಲಿಂದ ಕರಿಸಲು ಉಪಾಯವನ್ನು ಹುಡುಕಿರಿ ಏಂಬ" ಎಂದು ಭಾರತ ಸಹಾಯ ಕಾರ್ಯದರ್ಶಿಯನ್ನು ಕೇಳಿ ತಿಂಗಳು ಕೂಡ ಆಗಿಲ್ಲ. ಈ ಒಂದು ಪ್ರಶ್ನೆಯಿಂದ ಆತನು ತಾವೆಂಥರೆ ದೇವಾಂಶ ಸಂಭೂತರೆಂದೂ, ಭಾರತೀಯರೆಂದರೆ ಕೇವಲ ರಾಕ್ಷಸರೆಂದೂ ಅಭಿಪ್ರಾಯವನ್ನು ಪ್ರಪಂಚಕ್ಕೆಲ್ಲಾ ತಿಳಿಸಿದನು. ಆದರೆ, ದೇವರು ಒಂದು ತಿಂಗಳಲ್ಲಿ ಯೇ ಸತ್ಯವನ್ನು ವ್ಯಕ್ತಪಡಿಸಿಬಿಟ್ಟಾನೆ.

ಆ ಸಮಯಕ್ಕೇ ದಕ್ಷಿಣ ಆಫ್ರಿಕಾದಲ್ಲಿ ಸರ್ವ ಜನರಿಗೂ ನ್ಯಾಯವನ್ನೂ ಶಾಂತಿಯನ್ನೂ ಕೋರುವ ಜಾ|| ಸ್ಮಟ್ಸರ ಯಾಜಮಾನ್ಯದಲ್ಲಿ ಏಷ್ಯಾ ವಾಸಿಗಳ ಪೌರಹಕ್ಕುಗಳನ್ನು ನಿರಾಕರಿಸುವ ಬಿಲ್ಲನ್ನು ಯೋಚಿಸುತ್ತಿದ್ದರು. ಅದು ಆ ಮೇಲೆ ಪ್ಯಾಸಾಯಿತ. 13-6-46 ರಿಂದ ಅಲ್ಲಿಯ ಭಾರತೀಯರು ಸತ್ಯಾಗ್ರಹವನ್ನು ಆಚರಿಸುತ್ತಿರುವರು. ಭಾರತೀಯರು ನಿಷೇಧಿಸಲ್ಪಟ್ಟಿರುವ ಪ್ರದೇಶಗಳಿಗೆ ದರ್ಬಾ ನಗರದಲ್ಲಿ ಪ್ರವೇಶಿಸಿ ಡೇರಾಗಳನ್ನು ಹಾಕಿಗೊಂಡು ಕೂತುಕೊಂಡರು. 20 ಮಂದಿ ಭಾರತೀಯರಿಂದ ಸತ್ಯಾಗ್ರಹ ಪ್ರಾರಂಭವಾಯಿತು. ವಿದ್ಯಾಧಿಕರಾದ ಹೆಣ್ಣುಮಕ್ಕಳು ಐರು ಮಂದಿ ಕೂಡ ಬಂದು ಸೇರಿದರು. ಡರ್ಬಾ ನಗರದಲ್ಲಿಯೇ ಅಲ್ಲದೆ ಟ್ರಾನ್ಸ್ವಾಲ್ ಮೊದಲಾದ ಇತರ ಪಟ್ಟಣಗಳಲ್ಲಿಯೂ ಸತ್ಯಾಗ್ರಹ ನಡೆಯಲಿದೆ.

ಈ ಕಾನೂನು 'ದೇವಾಂಶ ಸಂಭೂತ'ರಾದ ಯೂರೋಪಿಯರು ಪ್ರಾಚ್ಯರ ಸಂಪರ್ಕ ಸಾಮೀಪ್ಯಗಳಿಂದ ಮೈಲಿಗೆ ಯಾಗದಂತಿರಲು ಮಾಡಲ್ಪಟ್ಟಿದೆ. ಆ ಸರ್ಕಾರವು ಶ್ವೇತ ಪ್ರಜಾ ಪ್ರತಿನಿಧಿ ಪ್ರಭುತ್ವ ಆಶ್ವೇತ ಪ್ರಭುತ್ವವೂ ಆಶ್ವೇತ ಪ್ರಜೆಗಳೂ ಈ ಸತ್ಯಾಗ್ರಹವನ್ನು 'ಅಡ್ಡ ಕತ್ತರಿ' ವ್ಯೂಹದಲ್ಲಿ ಸೇರಿಸಿ ಭೇದಿಸಲಿಳಿದಿದೆ.

17 ನೇ ತಾರೀಖಿನ ದಿನ 30 ಮಂದಿ ಯೂರೋಪಿಯನ್ನರು ಸತ್ಯಾಗ್ರಹಿಗಳ ಗುಡಾರಗಳನ್ನು ಕಿತ್ತು ಅವರ ಮೇಲೆ ಬಿದ್ದು ಅವರನ್ನು ಹಿಡಿದುಕೊಂಡು ಹೋದರು

ಮೂರನೇ ದಿನ 100 ಮಂದಿ ಬಂದುಬಿದ್ದರು. ಸತ್ಯಾಗ್ರಹಿಗಳ 50 ಮಾತ್ರವೇ ಕಂಬಳಿಗಳನ್ನು, ತಲೆದಿಂಬುಗಳನ್ನೂ ಹರಿದು ಹಾಕಿದರು. ಸ್ಟ್ರೈಚರ್‌ಗಳನ್ನು ಒಡೆದು ಹಾಕಿದರು. ಇಬ್ಬರು ನಾರೀ ಮಣಿಗಳನ್ನು ಒದ್ದರು. ಹಿಂದೆ ಕೀಚಕನು ದ್ರೌಪದಿಯನ್ನು ಕಾಲಿನಿಂದ ವಿರಾಟನ ಸಭಾ ಸ್ಥಳಕ್ಕೆ ಎದುರು ಭಾಗದಲ್ಲಿ ಒದೆಯಲಿಲ್ಲವೆ.

ಮೂರನೇ ದಿನ ಯೂರೋಪಿಯರ್ ಒಂದು ದಂಡೇ ಬಂದು ಬಿತ್ತು. ಅವರೊಂದಿಗೆ ಸ್ತ್ರೀಯರೂ ಬಾಲರೂ ಕೂಡ ಇದ್ದರು. ಈ ದಿನ ಗುಡಾರಗಳನ್ನು ಅಗ್ನಿ ಹೋತ್ರನ ಪಾಲು ಮಾಡಲು ಕೂಡ ಯತ್ನಿಸಿದರು. ಸತ್ಯಾಗ್ರಹಿಗಳನ್ನು ಮನಸ್ಸನ್ನು ಕ್ರೂರವಾದ ಸುಡಿಗಳಿಂದ ನೋಯಿಸಿದರು.

ಸತ್ಯಾಗ್ರಹಿಗಳಿಗೆ ಅಲ್ಲಿಂದ ತೆರಳಲು ನೋಟೀಸು ಕೊಡಲ್ಪಟ್ಟಿತು. ಅವರು ತೆರಳದೆ ಇದ್ದುದ್ದರಿಂದ ಅರೆಸ್ಟು ಮಾಡಲ್ಪಟ್ಟರು. ವಿಚಾರಣೆಯಾಯಿತು. ನಾಯಕರಿಗೆ ಮಾತ್ರ ಒಂದು ತಿಂಗಳ ಶಿಕ್ಷೆಯು ವಿಧಿಸಲ್ಪಟ್ಟಿತು. ಅಂದಿನಿಂದ ಯೂರೋಪಿಯರ್ ಪ್ರಜೆಗಳ ಆಗಮನವಿಲ್ಲ.

ಇನ್ನೂ ಸತ್ಯಾಗ್ರಹಿಗಳ ಅರೆಸ್ಟು ಆಗುತ್ತಲೇ ಇದೆ. ಅದರಲ್ಲಿ ಯಾವ ವಿಶೇಷವೂ ಇಲ್ಲ. ಶ್ವೇತ ಜಾತಿಯ ಅಹಂಕಾರವೇ ಇಲ್ಲಿ ಗಮನಾರ್ಹವಾದದ್ದು. ಈ ಪ್ರಪಂಚದಲ್ಲಿ ಶಾಂತಿಯನ್ನೂ ಈ ಜಾತಿಗಳೇನೋ ನೆಲೆ ಗೊಳಿಸುವಂಥವು? ಈ ಸಂಶಯವು ನ್ಯಾಯವಾಗಿಯೇ ಪೂರ್ವ ದೇಶೀಯರಿಗೆ ಇದೆ.

('ತ್ರಿ'ದಿಂದ ಗ್ರಹಿಸಿದೆ.)

ಲಂಡನ್ನಿನ ನೆನಪಿನ ನಂದನವನ — ರಾಣಿ ಮೇರಿಯವರಿಂದ ಆರಂಭ

ಅಕ್ಕರ

ಸಾಮಾಜಿಕ

ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

ಲಾಭಬಡಕರಿಗೆ ಚಕ್ರ ಬಂತು

ಲಂಚಗುಳಿತನವನ್ನು ವಿರೋಧಿಸುವ ಶಾಖೆ (ಮುಂಬಯಿ) (ಆ್ಯಂಟಿ ಕರಪ್ಷನ್ ಬ್ರಾಂಚ್) ಯವರು ಜೂನ್ 22 ರವರೆಗೆ ಲಾಭಬಡಕತನ ಕಳ್ಳಪೇಟೆ ಮತ್ತು ಲಂಚಗುಳಿತನದ ವಿವಿಧ ಹದಿನೆಂಟು ಆರೋಪಗಳನ್ನು ಗೊತ್ತು ಹಚ್ಚಿದರು.

ಮೇಲೆ ಹೇಳಿರುವ ಶಾಖೆಯವರು ಪ್ಲಾಟ ಫಾರ್ಮು ಟಿಕೀಟುಗಳನ್ನು ಮಾರುತ್ತಿದ್ದ ಈರ್ವರನ್ನು ಬಂಧಿಸಿದ್ದಾರೆ. ಅಪರಿಗೆ ತಲಾ 25 ರೂ ಗಳಂತೆ ದಂಡವನ್ನು ವಿಧಿಸಲಾಯಿತು. ಏಕ್ಟೋರಿಯಾ ಗಾಡಿ ಹೊಡೆಯುವವರಿಬ್ಬರು ಹೆಚ್ಚು ಬಾಡಿಗೆಯನ್ನು ಕೇಳಿದ್ದಕ್ಕಾಗಿ ಅವರನ್ನು ಜೂನ 9 ಕ್ಕೆ ಬಂಧಿಸಲಾಯಿತು. ಸಿನೇಮಾ ಟಿಕೀಟುಗಳ ಸಂಬಂಧದಲ್ಲಿ ಗದ್ದಲ ಮಾಡಿದ್ದಕ್ಕಾಗಿ ಮೂವರನ್ನು ಬಂಧಿಸಲಾಯಿತು ಅವರಲ್ಲಿ ಇಬ್ಬರಿಗೆ ತಲಾ 10 ರೂ. ದಂಡವನ್ನು ವಿಧಿಸಲಾಯಿತು. ಮೂರನೆಯವನ ಅಪರಾಧವು ಒಪ್ಪಿತವಾಗಲಿಲ್ಲ. ಆದುದರಿಂದ ಆಪಸನ್ನು ಬಿಟ್ಟುಬಿಡಲಾಯಿತು.

ಮೂವರು ಪೋಲೀಸರು ಮತ್ತು ಒಬ್ಬ ಡೈ ಚೀಫ್ ಇನ್‌ಸ್ಪೆಕ್ಟರ ಆಫ್ ರೇಷನಿಂಗ್ ಇವರು ಅನ್ಯಾಯವಾದ ಹಣ ಸ್ವೀಕರಿಸುತ್ತಿದ್ದಾಗ ಹಿಡಿಯಲ್ಪಟ್ಟರು.

ಉಳಿದ ಏಟ್ಲೆಗಳು— ಲಾಯಿಸೆನ್ಸ ಇಲ್ಲದೆ ಮದ್ಯವನ್ನು ಮಾರುವುದು, ಅರಳೆಯು ನೂಲಿಗಾಗಿರುವದರವ್ತು ಮಾಡುವ ಲಾಯಿಸೆನ್ಸನ್ನು ಉಪಯೋಗಿಸಿ ನಾರನ್ನು ಹೊರಗೆ ಕಳುಹಿಸುವುದಕ್ಕೆ ಯತ್ನ ಮಾಡುವುದು, ಲಂಚವನ್ನು ಕೊಡುವುದು, ಉಕ್ಕು ಪಡೆಯಲು ಮತ್ತೊಬ್ಬರ ಅಪ್ಪಣೆ ಚೀಟಿಯನ್ನು ಉಪಯೋಗಿಸುವುದು, ಜಮೀನದಾರನು ಪರಿಗಡಿ ತಕ್ಕೊಳ್ಳುವುದು, ಕೂಪನುಗಳಿಲ್ಲದೆ ಪೆಟ್ರೋಲನ್ನು ಮಾರುವುದು ಮತ್ತು ಫೌಂಟೆನ್ ಪೆನ್ ಸಾಯಿಕಲ್ ಮತ್ತು ಬಟ್ಟೆಗಳಲ್ಲಿ ಲಾಭ ಪಡೆಯುವುದು ಇವುಗಳಿಗೆ ಸಂಬಂಧಿಸಿವೆ. (ಹು. ಗೆ.)

ಪ್ರಜಾ ಪ್ರಭುತ್ವವೇ ?

ಬೊಂಬಾಯಿ, ಜುಲೈ 7 — ನಾವು ಭಾರತದಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪಿಸುವೆವು —. ಎಂಬುದಾಗಿ ಪಂಡಿತ ಜವಾಹರಲಾಲ್ ನೆಹರು ಭಾರತದ ಸ್ವಾತಂತ್ರ್ಯದ ಯೋಜನೆ ಕುರಿತು ಈ ದಿನ ಆ ಭಾ. ಕಾಂ. ಸಮಿತಿಯಲ್ಲಿ ಮಾಡಿದ ಭಾಷಣದಲ್ಲಿ ತಿಳಿಸಿದ್ದಾರೆ

ಬೊಂಬಾಯಿ, ಜುಲೈ 7 — ಪ್ರಾರ್ಥನಾ ಕಾಲದಲ್ಲಿ ಹರಿಜನರು ಎಷ್ಟು ಮಂದಿ ಇರುವುದನ್ನು ತಿಳಿಯಲು ಗಾಂಧೀಜಿ ಕೇಳಿದಾಗ ಒಬ್ಬ ಅಸಾಮಿಯೂ ದೊರಿಇಲ್ಲ?

ಹೆಂಡತಿ ಭಾಷಣ ಕೇಳಿ ಅಸ್ವಸ್ಥತೆ ಗುಣವಾಯಿತು

ಇಟಲಿಯ ಒಂದು ಆಸ್ಪತ್ರೆಯಲ್ಲಿ ಓರ್ವ ಬ್ರಿಟಿಷ್ ಯೋಧನು ಕಠಿಣ ಖಾಯಿಲೆಯಿಂದ ನರಳುತ್ತಿದ್ದನು. ಖಾಯಿಲೆಯ ನಂಳಾಟದಲ್ಲಿ ಒಂದೇಸವನೆ ಹೆಂಡತಿಯ ಹೆಸರೆತ್ತಿ ಕೂಗುತ್ತಿದ್ದ. ಸೈನ್ಯದ ಯೋಗಕ್ಷೇಮ ವಿಚಾರಿಸುವ ಅಧಿಕಾರಿಗಳು ಕೂಡಲೇ ಯುದ್ಧ ಕಚೇರಿ ಬ್ರಾಟ್‌ಕ್ಯಾಸ್ಟ್ ಸ್ಟೇಷನ್ನಿಗೆ ವೈರ್‌ಲೆಸ್ ಮೂಲಕ, ಅವನ ಹೆಂಡತಿಯ ಮಾತು ಗಳನ್ನು ಒಂದು ಗ್ರಾಮಫೋನು ರಿಕಾರ್ಡಿನಲ್ಲಿ ಸಂಗ್ರಹಿಸುವಂತೆ ತಿಳಿಸಿದರು. ಆ ರಿಕಾರ್ಡನ್ನು ವಿಮಾನ ಕಳುಹಿಸಿ ಇಟಲಿಗೆ ತರಿಸಿಕೊಳ್ಳಲಾಯಿತು. ಅಸ್ವಸ್ಥದಿಂದ ನರಳುತ್ತಿದ್ದ ಯೋಧನ ಮುಂದೆ ಆ ರಿಕಾರ್ಡು ಕೂಗಿಸಿದಾಗ ಅವನ ಮನಸ್ಸಿಗೆ ನೆಮ್ಮದಿ ದೊರೆಯಿತು. ಅಂದು ಮೊದಲ್ಗೊಂಡು ದಿನೇದಿನೇ ಅವನ ಅಸ್ವಸ್ಥತೆಯು ವಾಸಿಯಾಗುವ ಲಕ್ಷಣಗಳು ಕಂಡುಬಂದವು. (ಪ್ರ)

ಅಮೇರಿಕಾದ ಕೆಲವು ತಲಬುಗಳು

ಸಂಯುಕ್ತ ಅಮೇರಿಕಾದಲ್ಲಿ ಅತ್ಯಂತ ಹೆಚ್ಚು ತಲಬು ಪಡೆಯುವಳೆಂದರೆ ಪ್ರಸಿದ್ಧ ಹಾಲಿವುಡ್ ಕಾರ್ಮಿಕ ವಿರಾಂಡ. ಇವಳಿಗೆ ತಿಂಗಳಿಗೆ 50 ಸಾವಿರ ಪವನಿಗೆ ಮೇಲ್ಪಟ್ಟು ತಲಬು ದೊರೆಯುವುದು.

ನಟವರ್ಗದಲ್ಲಿ ಹೆಚ್ಚಿಗೆ ಸಂಬಳ ಪಡೆಯುವವನೆಂದರೆ ಫ್ರೆಡ್ ಮೆಕ್ಮರ್ರಿ. ಇವನ ಮಾಸಿಕ ತಲಬು 97 ಸಾವಿರ ಪವನುಗಳು.

ಅಮೇರಿಕಾದ ವ್ಯಾಪಾರಿಗಳಲ್ಲಿ ಹೆಚ್ಚಿಗೆ ತಲಬು ಸಂಪಾದಿಸುವವರೆಂದರೆ ಜನರಲ್ ಮೋಟಾರ್ಸ್ ಕಂಪೆನಿಯ ಅಧ್ಯಕ್ಷ ಚಾಲ್ಸ್ ವಿಲ್ಸನ್ನರು. ಇವರಿಗೆ ತಿಂಗಳಿಗೆ 90 ಸಾವಿರ ಪವನು ಮೇಲ್ಪಟ್ಟು ತಲಬು ದೊರೆಯುತ್ತದೆ. ಹೋಲಿವುಡ್ ದಿಗ್ದರ್ಶಕ ಲಮೋ ವೆ ಕೇರಿ ತಿಂಗಳಿಗೆ 278 ಸಾವಿರ ಪವನಿಗೆ ಮೇಲ್ಪಟ್ಟು ಸಂಪಾದಿಸುತ್ತಾನೆ.

—ಗಾಂಧೀಜಿ ಬುದ್ಧಿವಾದ—

ಪೂನಾದ ಒಬ್ಬ ಅಂಚೆಯವನು ಮುಷ್ಕರದ ಹಿಂದಿನ ದಿವಸ ಗಾಂಧೀಜಿಯವರಿಗೆ ಕಾಗದ ಕೊಡಲು ಹೋಗಿದ್ದಾಗ "ನಿಮ್ಮ ಮುಷ್ಕರವನ್ನು ಶಾಂತಿ ರೀತಿಯಿಂದ ನಡೆಸಿವರೆ, ನಿಮ್ಮ ವಿಜಯ ಖಂಡಿತ" ಎಂದು ಅವರು ತಿಳಿಸಿದರು.

ಆಟಂ ಬಾಂಬ ಪ್ರಯೋಗ ರಷ್ಯನರ ಅಕ್ಷೇಪ

ಸೋವಿಯಟ ಸರಕಾರದ ಮುಖ ಪತ್ರವಾದ ಇಝುವೆಸ್ತಾ ಪತ್ರಿಕೆ ಆಟಂ ಬಾಂಬ ಪ್ರಯೋಗದ ಬಗ್ಗೆ ಲೇಖ ಬರೆದು, ಆಟಮಿಕ್ ಶಕ್ತಿಯ ನಿಶಸ್ತ್ರೀಕರಣ ಮಾಡುವದಾಗಿ ಹೇಳುವ ಅದೆಂಥ ಕನ್ನರ ಮಾತುಗಳಲ್ಲ ಇದರಿಂದ ವಿಶ್ವಾಸ ಹಾರಿಹೋಯಿತೆಂದು ಹೇಳಿದೆ. ಈ ಶಕ್ತಿ ಉಪಯೋಗವನ್ನೇ ಬಿಟ್ಟು ಕೊಡುವದಾಗಿ ಹೇಳಿದಾಗ ಈ ಪ್ರಯೋಗದ ಅವಶ್ಯಕತೆ ಏನಿತ್ತು ? ಅಮೇರಿಕನರು ಈ ಶಸ್ತ್ರವನ್ನು ಪರಿಪೂರ್ಣಗೊಳಿಸಲು ಪ್ರಯತ್ನಿಸುವರಲ್ಲದೆ ಅದರ ನಾಶವನ್ನು ಅವರು ಬಯಸುವದಿಲ್ಲೆಂದೂ ಅದು ಬರೆದಿದೆ.

ಶೂಲವೇ ಮಾಯ !

ಬರ್ಲಿನ್ ಜು 9 — ಮರಣ ದಂಡನೆ ನಡೆಸುವ ಶೂಲವೇ ಮಾಯವಾಗಿರುವುದರಿಂದ ಸಧ್ಯ ಮರಣ ದಂಡನೆಗೆ ಳಗಾದ ನಾಜಿಗಳ ಜೀವ ಉಳಿದಿದೆ.

೪೦ ವರ್ಷಗಳ ನಿರ್ಬಂಧ

ಪ್ಯಾರಿಸ್ ಜೂ 9— ಜರ್ಮನಿಯು ತೆರಬೇಕಾದ ಪರಿಹಾರ ನಿಧಿಯು ತೀರ್ಮಾನವಾಗಬೇಕೆಂದೂ, ಆದರ ಶಸ್ತ್ರಸನ್ಯಾಸವು 40 ವರ್ಷಗಳಿಂಬೇಕೆಂದೂ, ಮಾಲ್ಟೋವೊರವರು ವಿದೇಶಾಂಗ ಮಂತ್ರಿಗಳ ಸಮ್ಮೇಳನದಲ್ಲಿ ನುಡಿದರು.

ಮಿಶ್ರ ಮಂತ್ರಿಮಂಡಲವೇ

ಕರಾಚಿ ಜು 10 — ಸಿಂಧಿನಲ್ಲಿ ಲೀಗು ಮಂತ್ರಿಮಂಡಲ ಉರುಳಿಸಿ, ಮಿಶ್ರ ಮಂತ್ರಿಮಂಡಲ ಸ್ಥಾಪಿಸುವ ಪ್ರಯತ್ನ ನಡೆಯುತ್ತಿದೆ.

ಸಂಸ್ಥಾನದ ಆಹಾರ ಸ್ಥಿತಿ

ಬೆಂಗಳೂರು ಜು 10— ಸರಕಾರದ ಪಬ್ಲಿಸಿಟಿ ಆಫೀಸರವರು, ಮೈಸೂರು ಆಹಾರ ಸರಬರಾಜು ಡೈರೆಕ್ಟರು ಹೊರಡಿಸಿರುವ ಜೂ 30 ಕ್ಕೆ ಆಖೈರಾಗುವ ಪಕ್ಷದ ಸಂಸ್ಥಾನದ ಆಹಾರ ಪರಿಸ್ಥಿತಿಯ ಅಂಕಿಅಂಶಗಳನ್ನು ಪ್ರಕಟಿಸಿರುವರು

ಪ್ರತಿಭಟನೆ

ವಿಯನ್ನಾ ಜುಲೈ 10 .... ಆಸ್ಟ್ರೀಯಾ ಪಾರ್ಲಿಮೆಂಟು ರಷ್ಯದ ಆಜ್ಞೆಗೆ ವಿರೋಧವಾಗಿ 161–4 ಮತಗಳಿಂದ ಜಯ ಪಡೆಯಿತು. ರಷ್ಯಾ ಆಕ್ರಮಿತ ಜರ್ಮನಿಯ ಆಸ್ಟ್ರಿಯಾಸ್ತಿಯನ್ನು ಯುದ್ಧನಷ್ಟ ದೆಸೆಗಾಗಿ ಆಕ್ರಮಿಸಿಕೊಳ್ಳಲು ರಷ್ಯಾ ಕೊಟ್ಟ ಆಜ್ಞೆಯನ್ನು ಆಸ್ಟ್ರೀಯಾ ಪಾರ್ಲಿಮೆಂಟು ಪ್ರತಿಭಟಿಸಿದೆ.

ಇದಕ್ಕೇನನ್ನಬೇಕು ?

ವಿಸೆಸ್ ಯಲರ್ಲಿ ಬಿನಿಂಗ್‌ಸ್ಟ್ 15–6–46 ರಲ್ಲಿ ಹೀಗೆ ನುಡಿದಿರುವಳು–

ಕೋಟಿಗಟ್ಟಲೆ ಜನರು ಸ್ವಾತಂತ್ರ್ಯಕ್ಕಾಗಿ ಆಕ್ರೋಶಪಡುತ್ತಿರುವರು. ಅದಕ್ಕೆ ಬಾಧ್ಯರು ನಾವು. ಬ್ರಿಟಿಷ್ ಸಾಮ್ರಾಜ್ಯ ತತ್ವವು ನೆರೆತುಹೋಗಿದೆಯೆಂದು ಅಟ್ಲೀ ಪ್ರಧಾನಿ ನುಡಿದಿರುವನು. ಆದರೆ ಸಾಮ್ರಾಜ್ಯ ಇನ್ನೂ ಹಿಂದಿನಂತೆಯೇ ಇದೆ. ಅಲ್ಲಿ ನಡೆಯುವದಕ್ಕೆಲ್ಲಾ ನಾವೇ ಬಾಧ್ಯರು. ಕಾರ್ಮಿಕ ಸರಕಾರವು ಏರ್ಪಟ್ಟನಂತರ ಟ್ರಿನಿಡಾಡಿನಲ್ಲಿ ಖಡ್ಗಮೃಗದ ಚರ್ಮದಿಂದ ಹೆಚ್ಚಿದ ಕೊಡಾಗಳಿಂದ ಹೊಡೆಯುವಿಕೆಯು ಆರಂಭವಾಗಿದೆ. ಕೆನ್ಯಾ, ಯುಗಾಂಡಾಗಳಲ್ಲಿಯ ಪರ್ವತ ಪ್ರಾಂತ್ಯಗಳಲ್ಲಿ ನಾಲ್ಕು ಸಾವಿರ ಮಂದಿ ದೇಶೀಯರು ಮನೆಮಠಗಳನ್ನು ಕಟ್ಟಿಕೊಂಡು, ಸ್ಕೂಲು, ಚರ್ಚುಗಳನ್ನು ಸ್ಥಾಪಿಸಿಕೊಂಡು ಜೀವಿಸುತ್ತಿರುವಾಗ ಅಲ್ಲಿಗೆ ಸೆಲೆಸಲು ಹೋದ 500 ಮಂದಿ ಶ್ವೇತವರ್ಣದವರು ಅವರನ್ನು ಓಡಿಸಿ ಆ ಭೂಮಿಯನ್ನು ಆಕ್ರಮಿಸಿಕೊಳ್ಳುತ್ತಿರುವರು.

ಕೈ ಮಗ್ಗದ ಬಟ್ಟೆ

ಈಗ ಬಟ್ಟೆಯ ಬರವೇಕೆ ! ಕೈಮಗ್ಗದ ಬಟ್ಟೆಯು ಹಚ್ಚಿರುವಿಕೆಯೇ ! ನೇಯುವ ಕೂಲಿಯು ಈಗ ಹೆಚ್ಚಿರುವುದು ಎಂದೂ ಹೆಚ್ಚಿರಲಿಲ್ಲ. ಧಾನ್ಯಗಳ ಬೆಲೆ 1939–40 ರಲ್ಲಿ ನೆಯ್ಗೆಯ ಕೂಲಿಗಜಕ್ಕೆ ಒಂದು ಆಣೆಯಿತ್ತು. ಈಗ ಅದು ಆರಾಣ್ಣ ಹೆಚ್ಚಿದೆ. ಈಗ ಬಟ್ಟೆಯಿಲ್ಲದ ಬರವಲ್ಲ ಬಂದಿರುವದು, ಭರಿಗಲಾರದ ಬೆಲೆಯುಳ್ಳ ಬರವಿದು. 1942 ರಲ್ಲಿ ನೂಲಿನ ಬೆಲೆಯು ನಿಯಂತ್ರಣ ಇರಲಿಲ್ಲ. ಆಗ 20 ನೇ ನಂಬರ ನೂಲು 10 ಪೌಂಡುಗಳ ಕಟ್ಟನ್ನು 40 ರೂ. ಗಳಿಗೆ ಮಾರುತ್ತಿದ್ದರು. ಈಗ ಅದೇ ಕಟ್ಟನ ಬೆಲೆ 13 ರೂ. ಗಳು. ಆದರೂ ಬಟ್ಟೆಯ ಬೆಲೆ 1942 ರ ಬೆಲೆಗಿಂತ ಎರಡರಷ್ಟಕ್ಕಿಂತ ಹೆಚ್ಚಿದೆ. ನೇಯಿಗೆ ಕೂಲಿ ಅತ್ಯಧಿಕವಾಗಿ ಹೆಚ್ಚಿರುವುದೇ ಕಾರಣವು. ನಿತ್ಯ ಕೃತ್ಯಗಳಿಗೆ ಅವಶ್ಯಕವಾಗುವ ಎಲ್ಲಾ ಪದಾರ್ಥಗಳ ಬೆಲೆಯನ್ನು ನಿಗದಿ ಮಾಡಿದಲ್ಲಿ ಈ ಕಷ್ಟಗಳೆಲ್ಲಾ ನಿವಾರಣೆಯಾಗಬಹುದು.

ಲೀಗಿನ ಅಸಹಕಾರವೇ

ಹೊಸದೆಹಲಿ ಜು 10 — ರಾಜ್ಯಾಂಗ ರಚನಾ ಸಮಿತಿಯಲ್ಲಿ ಲೀಗು ಭಾಗವಹಿಸಲಾರದೆಂದು ಒಂದು ಊಹಾಪೋಹ ಹುಟ್ಟಿದೆ.

ನೆಹರು ಮತ್ತು ಕಾಶ್ಮೀರಕ್ಕೆ

ಬೊಂಬಾಯಿ ಜು 10 — ಕಾಶ್ಮೀರದ ಪ್ರಶ್ನೆ ಅಖಿಲ ಭಾರತದ ಪ್ರಶ್ನೆಯಾಗಿರುವದೆಂದೂ ಅಬ್ದುಲ್ಲಾರವರ ವಿಚಾರಣೆ ಕಾಲಕ್ಕೆ ತಾವು ಅಲ್ಲಿಗೆ ಹೋಗುವೆವೆಂದೂ ಪಂ|| ನೆಹರೂರವರು ಪತ್ರಿಕಾ ಪ್ರತಿನಿಧಿಗಳ ಸಮ್ಮೇಳನದಲ್ಲಿ ತಿಳಿಸಿದರು.

ಬಟ್ಟೆ ಅಂಗಡಿ ಮೇಲೆ ಧಾಳಿ

ಕುನ್ನೂರು ಜುಲೈ 8 — ಈಚೆಗೆ ಪೋಲಿಸರು ಅನೇಕ ಬಟ್ಟೆ ಮತ್ತು ಅಕ್ಕಿ ರೇಷ್ ಅಂಗಡಿಗಳ ಮೇಲೆ ಧಾಳಿ ನಡೆಸಿ ಹೆಚ್ಚು ಶೇಖರಿಸಿರುವುದಕ್ಕೆ ವಿಚಾರಣೆಗೊಳಪಡಿಸಿದ್ದಾರೆ. ಈಗ ಮುಚ್ಚಿದ್ದ ಬಟ್ಟೆ ಮತ್ತು ಆಹಾರ ಪದಾರ್ಥ ಹೊರಗೆ ಬರುತ್ತಿದೆ.

ಜವಳಿ ವ್ಯಾಪಾರಿಗೆ ಶಿಕ್ಷೆ

ಸರಕಾರದಿಂದ ಕೈಸೆರಿಹಿಂದ್ ಪದಕವನ್ನು ಪಡೆದ ಗೋಕಾಕದಲ್ಲಿಯ ಜವಳಿ ವ್ಯಾಪಾರಿಗಳಾದ ಪರಮಶೆಟ್ಟಿ ಕಾಡಪ್ಪ ಪಾಟೀಲ ಇವರಿಗೆ ನಿಯಂತ್ರಿತ ದರಕ್ಕಿಂತ ಹೆಚ್ಚಿನ ಬೆಲೆಗೆ ೨|| ಗಜ ಅರಿವೆಯನ್ನು ಮಾರಿದ ಅಪಾದನೆಗಾಗಿ ಭಾರತ ಸಂರಕ್ಷಣೆ ಕಾನೂನು ಕೆಳಗೆ 100 ರೂ. ದಂಡ ಇಲ್ಲವೆ 2 ತಿಂಗಳ ಕಠಿಣ ಶಿಕ್ಷೆಯನ್ನು ಇಲ್ಲಿಯ ರೆಸಿಟೆಂಟ ಮ್ಯಾಜಿಸ್ಟ್ರೇಟರಾದ ಎಸ್. ಆರ್. ತ್ರಿನಾಯಿಕ ಇವರು ವಿಧಿಸಿದರು.

ಸುಳ್ಳು ಲೆಕ್ಕಕ್ಕಾಗಿ ಶಿಕ್ಷೆ

ನವದೆಹಲಿ ಜು 5— ಎಂ. ಐ. ಎಸ್ ಶಾಖೆಯ ಸಬ್ ಡಿವಿಜ್ ಆಫೀಸರಾದ ಇ. ಕೆ. ಕೃಷ್ಣನ್ನರು ಸುಳ್ಳು ಹೆಸರುಗಳನ್ನು ಲೆಕ್ಕದಲ್ಲಿ ತೋರಿಸಿ ಸಂಬಳ ತೆಗೆಯುತ್ತಿದ್ದುದರಿಂದ ಅವರಿಗೆ 18 ತಿಂಗಳು ಕಠಿಣ ಸಜಾ ಮತ್ತು 1000 ರೂ. ದಂಡ ವಿಧಿಸಲಾಗಿದೆ.

ವಿವಿಧ ವಿಷಯ

ಸಿಕಂದರಾಬಾದ್ ಜುಲೈ 9 — ಏಳು ವರ್ಷಗಳಿಂದ ನಿಂತಿದ್ದ ಸಿಕಂದರಾಬಾದಿನ್ ಕುದುರೆ ಜೂಜು ಮತ್ತೆ ನಾಳೆಯಿಂದ ಪ್ರಾರಂಭವಾಗುವುದು.

ಲಾಹೋರು ಜು 7— ಇಲ್ಲಿ ಬಿಸಿಲಿನ ಝಳದಿಂದ ಮೂರು ಜನರ, ಮತ್ತು ಗಾಡಿಗೆ ಕಟ್ಟಿದ್ದ 15 ಕುದುರೆಗಳ ಪ್ರಾಣ ಹೋಯಿತು.

ಜರ್ಮನಿಯಲ್ಲಿ ಕಳೆದ ಮಹಾ ಯುದ್ಧದಲ್ಲಿ 70 ಲಕ್ಷ ಪುರುಷರು ಹತರಾದುದರಿಂದ ಅಲ್ಲಿ ಪುರುಷರ ಅಭಾವ ಹೆಚ್ಚಿದೆಯೆಂದೂ ಕೆಲವೆಡೆ ಗಂಡಸರಿಗೆ ಎರಡರಷ್ಟು ಹೆಂಗಸರಿದ್ದಾರೆಂದು ಹೇಳಲಾಗಿದೆ.

ಪ್ಯಾರಿಸ್ ಜು 8 — ಶಾಂತಿ ಸಮ್ಮೇಳನದ ಬಗ್ಗೆ ಆಹ್ವಾನಗಳು 24 ಗಂಟೆಗಳೊಳಗೆ ಕಳುಹಿಸಲಾಗುವುದು. ಚೀನಾ ಬಿಟ್ಟು ಮಿಕ್ಕ 4 ಮಹಾರಾಷ್ಟ್ರಗಳು ಸಹಿ ಮಾಡುವುವು.